# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಸ್ಥಳಗಳನ್ನು ಸ್ಥಳಾಂತರಿಸಿ/ಪರಿವರ್ತಿಸಿ ಆದೇಶ ಹೊರಡಿಸುವ ಕುರಿತು

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಸಕಇ 84 ಅಸಂಯೋ 2007, ದಿನಾಂಕ:26-06-2007
2. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 167 ಎಂಡಿಎಸ್ 2014, ದಿನಾಂಕ: 25-01-2016.
3. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 185 ಎಂಡಿಎಸ್ 2017, ದಿನಾಂಕ: 24-06-2017.
4. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಏಕಕಡತ ಪ್ರಸ್ತಾವನೆ ಸಂಖ್ಯೆ:ಅಸಂನಿ/ವಿನಿ/ಸ್ಥಳಾಂತರ/ಸಿಆರ್-22/2018-19, ದಿನಾಂಕ:05-04-2018.

<><><>

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಿಂದ (3)ರ ಸರ್ಕಾರದ ಆದೇಶಗಳಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

| ಕ್ರ.ಸಂ | ಜಿಲ್ಲೆ | ಸ್ಥಳ |
|---|---|---|
| 1 | ಹಾಸನ | ಚನ್ನರಾಯಪಟ್ಟಣ |
| 2 | ಚಿತ್ರದುರ್ಗ | ಮೊಳಕಾಲ್ಮೂರು |
| 3 | ದಾವಣಗೆರೆ | ಚನ್ನಗಿರಿ |
| 4 | ಚಿಕ್ಕಮಗಳೂರು | ಬೇಲೂರು |
| 5 | ಬೆಳಗಾವಿ | ಕುಡಚಿ<br>ಹುಕ್ಕೇರಿ |
| 6 | ಬೆಳಗಾವಿ | ಮೂಡಲಗಿ |
| 7 | ಮಂಡ್ಯ | ಮದ್ದೂರು |
| 8 | ರಾಮನಗರ | ಚನ್ನಪಟ್ಟಣ |

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ 09 ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು ಮಂಜೂರಾಗಿದ್ದು, ಸೂಕ್ತ ನಿವೇಶನ ದೊರಕದೇ ಇರುವ ಪ್ರಯುಕ್ತ ಹಾಗೂ ಸಾಕಷ್ಟು ಶಿಕ್ಷಣ ಸಂಸ್ಥೆಗಳು ಇಲ್ಲದೆ, ವಿದ್ಯಾರ್ಥಿನಿಲಯಗಳ ಬೇಡಿಕೆ ಇಲ್ಲದ ಕಾರಣ, ಇಲ್ಲಿಗೆ ಮಂಜೂರಾಗಿರುವ ವಿದ್ಯಾರ್ಥಿನಿಲಯಗಳು ಇದುವರೆವಿಗೂ ಪ್ರಾರಂಭವಾಗಿರುವುದಿಲ್ಲ. ಆದುದರಿಂದ, ವಿದ್ಯಾರ್ಥಿಗಳ ಲಭ್ಯತೆ, ಜನಪ್ರತಿನಿಧಿಗಳ ಬೇಡಿಕೆ, ಇಲಾಖಾ ಅಧಿಕಾರಿಗಳ ಸರ್ವೆ ಮೇರೆಗೆ ಬೇರೆ ಸ್ಥಳಗಳಲ್ಲಿ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು ಕೆಳಕಂಡ ಸ್ಥಳಗಳಿಗೆ

....2

ಸ್ಥಳಾಂತರಿಸಿ/ಪರಿವರ್ತಿಸಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ, ಬೇಡಿಕೆ ತಕ್ಕಂತೆ ಪರಿವರ್ತಿಸಿ ಸರ್ಕಾರದ ಆದೇಶ ಹೊರಡಿಸಬೇಕೆಂದು ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರು ಮೇಲೆ ಕ್ರಮ ಸಂಖ್ಯೆ(4)ರಲ್ಲಿ ಓದಲಾದ ಏಕಕಡತ ಪದ್ಧತಿಯನ್ವಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

**ಸ್ಥಳಾಂತರಿಸಬೇಕಾದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ.ಸಂ | ಜಿಲ್ಲೆ | ಹಾಲಿ ಮಂಜೂರಾಗಿರುವ ಸ್ಥಳ | ವಿದ್ಯಾರ್ಥಿನಿಲಯಗಳ ಹೆಸರು | ಸ್ಥಳಾಂತರಿಸಬೇಕಾದ ಸ್ಥಳ | ಮಂಜೂರಾತಿ ಸಂಖ್ಯೆ |
|---|---|---|---|---|---|
| 1 | ಹಾಸನ | ಚನ್ನರಾಯ ಪಟ್ಟಣ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ | ಶ್ರವಣಬೆಳಗೊಳ | 50 |
| 2 | ಚಿತ್ರದುರ್ಗ | ಮೊಳಕಾಲ್ಮೂರು | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ | ಚಿತ್ರದುರ್ಗ ನಗರ | 50 |
| 3 | ದಾವಣಗೆರೆ | ಚೆನ್ನಗಿರಿ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ | ದಾವಣಗೆರೆ ನಗರ | 50 |
| 4 | ಚಿಕ್ಕಮಗ ಊರು | ಬೀರೂರು | ಮೆಟ್ರಿಕ್ ನಂತರ ಬಾಲಕ ವಿದ್ಯಾರ್ಥಿನಿಲಯ | ಕಡೂರು | 50 |
| 5 | ಬೆಳಗಾವಿ | ಕುಡಚಿ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ | ರಾಯಭಾಗ್ | 50 |
| | | ಹುಕ್ಕೇರಿ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ | ಗೋಕಾಕ್ | 50 |

**ಪರಿವರ್ತಿಸಿ ಸ್ಥಳಾಂತರಿಸಬೇಕಾದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ.ಸಂ | ಜಿಲ್ಲೆ | ಹಾಲಿ ಇರುವ ವಿದ್ಯಾರ್ಥಿನಿಲಯಗಳ ವಿವರ | ಪರಿವರ್ತಿಸಿ/ಸ್ಥಳಾಂತರಿಸುವ ವಿವರ | ಮಂಜೂರಾತಿ ಸಂಖ್ಯಾಬಲ |
|---|---|---|---|---|
| 1 | ಬೆಳಗಾವಿ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಮೂಡಲಗಿ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ ಮೂಡಲಗಿ | 50 |
| 2 | ಮಂಡ್ಯ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಮದ್ದೂರು | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಕೆ.ಆರ್.ಪೇಟೆ | 50 |
| 3 | ರಾಮನಗರ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಚನ್ನಪಟ್ಟಣ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಚನ್ನಪಟ್ಟಣ | 50 |

...3